26

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಪ್ರಧಾನ ಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ 88    ದಿನಾಂಕ : DATE : 3/6/202

# ಮೋದಿ ಆಡಳಿತ ಶೇ.65.9ರಷ್ಟು ತೃಪ್ತಿಕರ

ಉ.ವಾ. 3/6/20

ಐಎಎನ್‌ಎಸ್- 'ಸಿ' ವೋಟರ್ ನಡೆಸಿದ ಸಮೀಕ್ಷೆಯಲ್ಲಿ ಬಹಿರಂಗ

ಒಡಿಶಾ, ಹಿಮಾಚಲ ಪ್ರದೇಶ, ಛತ್ತೀಸ್‌ಗಢ, ಆಂಧ್ರದಲ್ಲಿ ಅಪಾರ ಮೆಚ್ಚುಗೆ

ಪ್ರತಿಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲೂ ಮೋದಿ ಜನಪ್ರಿಯತೆ ಉತ್ತುಂಗದಲ್ಲಿ

ಬಿಹಾರ, ಉತ್ತರಾಖಂಡ, ಗೋವಾ ಹಾಗೂ ಹರ್ಯಾಣ ರಾಜ್ಯಗಳಲ್ಲಿ ಶೇ. 50 ರಷ್ಟು ತೃಪ್ತಿ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿಯವರ ಆಡಳಿತ ವೈಖರಿ ಬಗ್ಗೆ ದೇಶದ ಶೇ. 65.9ರಷ್ಟು ಜನರು 'ತೃಪ್ತಿ' ಭಾವವನ್ನು ವ್ಯಕ್ತಪಡಿಸಿದ್ದಾರೆ ಎಂದು ಸುದ್ದಿಸಂಸ್ಥೆ ಐಎಎನ್‌ಎಸ್, ಸಿ-ವೋಟರ್ ಸಂಸ್ಥೆಗಳು ನಡೆಸಿದ ಜಂಟಿ ಸಮೀಕ್ಷೆಯಲ್ಲಿ ತಿಳಿದುಬಂದಿದೆ. ಶೇ. 28.1ರಷ್ಟು ಜನರು, ಮೋದಿ ಆಡಳಿತವನ್ನು 'ಸಮಾಧಾನಕರ' ಎಂದಿದ್ದಾರೆ. ನಾನಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಸಮೀಕ್ಷೆ ನಡೆಸಲಾಗಿತ್ತು.

ಕರ್ನಾಟಕದಲ್ಲಿ ಮೋದಿ ಜನಪ್ರಿಯತೆ ಉತ್ತುಂಗಕ್ಕೇರಿದೆ ಎಂದು ಸಮೀಕ್ಷೆ ತಿಳಿಸಿದೆ. ನೆರೆಯ ಮಹಾರಾಷ್ಟ್ರದಲ್ಲಿದ್ದಂತೆ ಇಲ್ಲಿಯೂ ಶೇ. 82.56ರಷ್ಟು ಜನರು ಮೋದಿಯವರನ್ನು ಕೊಂಡಾಡಿದ್ದಾರೆ.

ಇನ್ನು ಕೊರೊನಾ ಬಿಕ್ಕಟ್ಟನ್ನು ವಿಶ್ವದ ಇತರ ರಾಷ್ಟ್ರಗಳ ನಾಯಕರು ನಿರ್ವಹಿಸಿದ ರೀತಿಗೂ ಮೋದಿಯವರು ನಿರ್ವಹಿಸಿದ ರೀತಿಗೂ ಸಾಕಷ್ಟು ವ್ಯತ್ಯಾಸಗಳಿದ್ದು, ಮೋದಿಯವರು ಕೈಗೊಂಡ ನಿರ್ಧಾರಗಳು ನಮಗೆ ತೃಪ್ತಿ ತಂದಿದೆ ಎಂದು ಶೇ. 58.36ರಷ್ಟು ಜನರು ತಿಳಿಸಿದ್ದಾರೆಂದು ಸಮೀಕ್ಷೆ ಹೇಳಿದೆ.



## ನಾಲ್ಕು ರಾಜ್ಯಗಳಲ್ಲಿ ಗರಿಷ್ಠ ಜನಪ್ರಿಯತೆ

ಮೋದಿ ಆಡಳಿತಕ್ಕೆ ಅತಿ ಹೆಚ್ಚು ಜನರು ಸೈ ಎಂದಿರುವುದು ಒಡಿಶಾದಲ್ಲಿ. ಅಲ್ಲಿ, ಶೇ. 95.6ರಷ್ಟು ಜನರು ತೃಪ್ತಿ ವ್ಯಕ್ತಪಡಿಸಿದ್ದರೆ, ಶೇ. 84.87ರಷ್ಟು ಜನರು ಮೋದಿಯವರ ಆಡಳಿತ 'ಅತ್ಯಂತ ತೃಪ್ತಿಕರ' ಎಂದಿದ್ದಾರೆ. ಕೇವಲ ಶೇ. 2.2ರಷ್ಟು ಜನರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಒಡಿಶಾ ಬಿಟ್ಟರೆ ಮೋದಿ ಆಡಳಿತಕ್ಕೆ ಅತಿ ಹೆಚ್ಚು ಮೆಚ್ಚುಗೆ ವ್ಯಕ್ತವಾಗಿರುವುದು ಹಿಮಾಚಲ ಪ್ರದೇಶ, ಛತ್ತೀಸ್‌ಗಢ, ಆಂಧ್ರ ಪ್ರದೇಶದಲ್ಲಿ. ಈ ರಾಜ್ಯಗಳಲ್ಲಿ ಕ್ರಮವಾಗಿ, ಶೇ. 93.95, ಶೇ. 92.73 ಹಾಗೂ ಶೇ. 83.6 ಮೆಚ್ಚುಗೆ ವ್ಯಕ್ತವಾಗಿದೆ. ಮೋದಿ ತವರು ರಾಜ್ಯ ಗುಜರಾತ್‌ನಲ್ಲಿ ಶೇ. 76.42 ರಷ್ಟು ಜನ ಸಂತೃಪ್ತಿ ವ್ಯಕ್ತಪಡಿಸಿದ್ದಾರೆ. ವರ್ಷಾಂತ್ಯಕ್ಕೆ ಚುನಾವಣೆ ನಡೆಯಲಿರುವ ಬಿಹಾರ, ಉತ್ತರಾಖಂಡ, ಗೋವಾ ಹಾಗೂ ಹರ್ಯಾಣದಲ್ಲೂ ಆಡಳಿತವನ್ನು ಮೆಚ್ಚಿಕೊಂಡಿದ್ದಾರೆ.

## ಬಿಎಸ್‌ವೈಗೆ 8ನೇ ಸ್ಥಾನ

ಅತ್ಯಂತ ಜನಪ್ರಿಯ ಮುಖ್ಯಮಂತ್ರಿಯಾರೆಂಬ ಬಗ್ಗೆ ಮಾಡಿರುವ ಮತ್ತೊಂದು ಸರ್ವೆಯಲ್ಲಿ ಬಿ.ಎಸ್. ಯಡಿಯೂರಪ್ಪ 8ನೇ ಸ್ಥಾನ ಗಳಿಸಿದ್ದಾರೆ. ಈ ಪಟ್ಟಿಯ ಮೊದಲ ಸ್ಥಾನದಲ್ಲಿ ನವೀನ್ ಪಟ್ನಾಯಕ್ (ಒಡಿಶಾ), 2ನೇ ಸ್ಥಾನದಲ್ಲಿ ಛತ್ತೀಸ್‌ಗಢದ ಭೂಪೇಶ್ ಭಾಗೇಲ್, 3ನೇ ಸ್ಥಾನದಲ್ಲಿ ಕೇರಳದ ಪಿಣರಾಯಿ ವಿಜಯನ್ ಇದ್ದಾರೆ. ಆಂಧ್ರಪ್ರದೇಶದ ಜಗನ್ಮೋಹನ್ ರೆಡ್ಡಿ 4ನೇ ಸ್ಥಾನದಲ್ಲಿ, ಮಹಾರಾಷ್ಟ್ರದ ಉದ್ಧವ್ ಠಾಕ್ರೆ 5, ದಿಲ್ಲಿಯ ಕೇಜ್ರಿವಾಲ್ 6ನೇ ಸ್ಥಾನದಲ್ಲಿದ್ದಾರೆ.